ನಾವು ತರ್ಕಿಸಬಹುದು. ದೇಚಮ್ಮ, ನಿಮ್ಮ ಯಜಮಾನರು ಈಗ ಮನೆಯಲ್ಲಿ ಇರುತ್ತಾರಾದರೆ, ನಾವೀಗಲೇ ಹೋಗೋಣ."

ತುಸು ಹೊತ್ತಿನಲ್ಲಿ ನಮ್ಮ ಕಾರು ಹಾಲುಗುಂದ ಮೂಲಕ ದೇವಣಗೇರಿಯ ಹಾದಿ ಹಿಡಿದಿತ್ತು. ಸುಮಾರು ಇಪ್ಪತ್ತು ನಿಮಿಷಗಳ ಪ್ರಯಾಣದ ನಂತರ, ಮುಖ್ಯ ರಸ್ತೆಯಿಂದ, ಎಡಗಡೆಯ ರಸ್ತೆಯಲ್ಲಿ ಚಲಿಸಿ, ಒಂದು ಸಾಧಾರಣ ಮನೆಯೆದುರು ಕಾರು ನಿಲ್ಲಿಸಿದೆ. ಆಗ ಮುಚ್ಚಿದ್ದ ಬಾಗಿಲು ತೆಗೆದು, ಇಣುಕಿದವನೇ ಓಂಕಾರಯ್ಯ ಎಂದು ಊಹಿಸಿದೆ. ದೇಚಮ್ಮ ಆತನಿಗೆ ನಮ್ಮನ್ನು ಪರಿಚಯಿಸಿದಾಗ, ಆತ ಅಸಹನೆಯಿಂದ ನುಡಿದ,

"ಇವರನ್ನೇಕೆ ಕರೆ ತಂದೆ? ನಮ್ಮನೇಲಿ ಪತ್ತೆದಾರರು ಬರುವಂತಹದು ಏನು ನಡೆದಿದೆ?"

"ಓಂಕಾರಯ್ಯನವರೇ, ದೇಚಮ್ಮ ನಮ್ಗೆ ಎಲ್ಲಾ ಹೇಳಿದಾರೆ. ಹೇಳಿ, ಪೇಪರ್ ವೆಯಿಟ್ ಒಯ್ಯಲು ಕುಪ್ಪಂಡ ವೇಣು ಬರ್ತೀನಿ ಅಂದಾಗ ನೀವ್ಯಾಕೆ ಗಾಬರಿಗೊಂಡಿರಿ?" ಕರಮಚಂದನ ಪ್ರಶ್ನೆಗೆ ಆತ ಒಂದು ಕ್ಷಣ ಮೌನವಾಗಿ, ನಂತರ ತುಟಿ ಬಿಚ್ಚಿದ,

"ನನ್ಗೆ ಒಂದೂ ಅರ್ಥಾವಾಗ್ತಿಲ್ಲ. ಕುಪ್ಪಂಡ ವೇಣು ಅಂದರೆ ಯಾರೂ ಅಂತಲೂ ಗೊತ್ತಿಲ್ಲ. ಈ ಪೇಪರ್ ವೆಯಿಟ್ ಪ್ರಕರಣ ಆರಂಭವಾಗಿದ್ದು, ಸುಮಾರು ಮೂರು ತಿಂಗಳ ಹಿಂದೆ, ವಿರಾಜಪೇಟೆಯ ಬಸ್ ನಿಲ್ದಾಣದಲ್ಲಿರೋ ನಾಡ್‌ಮನೆ ಹೋಟೆಲಿನಲ್ಲಿ." ಓಂಕಾರಯ್ಯ ನೆನಪಿನ ಚೀಲ ತೆರೆದ.

"ಹೆಚ್ಚಾಗಿ ಸಂಜೆ ನಾನು ವಿರಾಜಪೇಟೆಗೆ ಹೋಗುವುದು ವಾಡಿಕೆ. ಹಾಗೆ ಹೋದವನು ಏಳೂವರೆ ಹೊತ್ತಿಗೆ ಅಲ್ಲಿ ಕಾಫಿ ಕುಡಿದು, ಮತ್ತೆ ದೇವಣಗೇರಿಗೆ ಹಿಂದಿರುಗೋದು. ಈ ಘಟನೆ ನಡೆಯುವ ಒಂದು ವಾರದ ಮೊದ್ಲು ಅಲ್ಲಿ ನನಗೊಬ್ಬ ವ್ಯಕ್ತಿ ಪರಿಚಿತನಾದ. ಮೇದಪ್ಪ ಅನ್ನೋದು ಆತನ ಹೆಸರು. ಅವ್ನೂ ಅದೇ ಹೊತ್ತಿಗೆ ಬರ್ತಿದ್ದನಂತೆ. ನಾನು ಗಮನಿಸಿರಲಿಲ್ಲ. ಆತ ತುಂಬಾ ಚೆನ್ನಾದ ಮಾತುಗಾರ. ಆತನೊಡನೆ ಮಾತಾಡುದು ಖುಷಿ ಕೊಡ್ತಿತ್ತು. ಅವ್ನಿಗೆ ಯಾವ್ದೋ ಖಾಸಗಿ ಕಚೇರಿಲಿ ಕೆಲ್ಸವಂತೆ. ನಾನು ದೇವಣಗೇರಿಯವನು ಅಂದಾಗ ತಾನೂ ದೇವಣಗೇರಿಗೆ ಬರುತ್ತಿರುತ್ತೇನೆ, ಅಲ್ಲಿ ತನ್ನೊಬ್ಬ ಮಿತ್ರ ಇದ್ದಾನೆ ಅಂದಿದ್ದ. ಡಿಸೆಂಬರ್ ಹನ್ನೆರಡರಂದು ಆ ಘಟನೆ ನಡಿತು. ಮರುದಿನ ದೇವಣಗೇರಿಲಿ ಹುತ್ತರಿ ಹಬ್ಬ ಇತ್ತು. ಹಾಗಾಗಿ ದಿನಾಂಕ ನೆನಪಿದೆ. ಆತನ ಜೊತೆ ಹರಟುತ್ತಾ ದೋಸೆ ತಿನ್ತಿರಬೇಕಾದ್ರೆ ತನಗೆ ಕುಟ್ಟಕ್ಕೆ ಹೋಗೋದಿದೆ, ಬಸ್ಸಿಗಾಗಿ ಕಾಯ್ತಾ ಇದ್ದೇನೆ ಅಂತ ಹೇಳ್ದ. ಅಷ್ಟರಲ್ಲಿ, ಗಲ್ಲಾಪೆಟ್ಟಿಗೆಯ ಬಳಿ ಇಬ್ಬರು ಪೊಲೀಸರು ಕಾಣಿಸಿಕೊಂಡರು. ನನ್ನ ಗಮನ ಅತ್ತ ಹೋದಾಗ, ಆತನೂ ತಿರುಗಿ ನೋಡಿ, ಪಕ್ಕನೆ ಕತ್ತು ವಾಪಾಸು ತಿರುಗಿಸಿದ. ಪೊಲೀಸರನ್ನು ಕಂಡು ಆತ ಭಯಗೊಂಡಂತೆ ಅನಿಸಿತು." ಕ್ಷಣ ತಡೆದು, ಓಂಕಾರಯ್ಯ ಮುಂದುವರೆಸಿದ,

"ನಂತರ ನಡೆದಿದ್ದು ತೀರಾ ವಿಚಿತ್ರವಾದದ್ದು. ಮೇದಪ್ಪ ತನ್ನ ತಲೆಯನ್ನು ಬಗ್ಗಿಸಿ, ಪಿಸುಗುಟ್ಟುವಂತೆ ಉಸುರಿದ... ಆತನ ಮಿತ್ರನೊಬ್ಬ ಬರುವವನಿದ್ದು, ಆತನಿಗೆ ಒಂದು ಚೀಲ ಕೊಡಬೇಕಾಗಿತ್ತು. ಆತ ಇನ್ನೂ ಬಂದಿಲ್ಲವಾದ್ದರಿಂದ, ಆ ಚೀಲವನ್ನು ನನ್ನಲ್ಲಿ ಕೊಡಬಹುದೇ ಅಂತ ಕೇಳಿದ. ಆತನ ಮಿತ್ರ ದೇವಣಗೇರಿಯವನಾಗಿದ್ದು, ಆತನ ಹೆಸರು ತಮ್ಮಯ್ಯನೆಂದೂ, ಆತ ನನ್ನ ಮನೆಯಿಂದ ಅದನ್ನು ಒಯ್ಯುತ್ತಾನೆ ಎಂತಲೂ ಹೇಳಿದ. ನಾನು ಅದಕ್ಕೆ ಸಮ್ಮತಿಸಿದೆ. ಮೇದಪ್ಪ ನನ್ನ ಮನೆಯ ವಿಳಾಸ ಪಡೆದು, ತನ್ನ ಮಿತ್ರನಿಗೆ ಫೋನಿಸಿ ಹೇಳಿ, ನನ್ನ ಮೊಬೈಲ್ ಸಂಖ್ಯೆಯನ್ನು ನೀಡಿದ. ನಂತರ, ಆತ ಪೊಲೀಸರು ಹೋದರೇ ಎಂಬಂತೆ ಮೆಲ್ಲಗೆ ತಿರುಗಿ ನೋಡಿದ್ದನ್ನು ನಾನು ಗಮನಿಸಿದೆ. ಪೊಲೀಸರು ಅಷ್ಟರೊಳಗಾಗಿ, ಅತ್ತಿತ್ತ ಯಾರಿಗೋ ಹುಡುಕಾಡಿ, ವಾಪಸು ಹೋಗಿದ್ದರು. ಪೊಲೀಸರು ಇಲ್ಲದ್ದನ್ನು ಕಂಡು, ಆತ ನಿರಾಳಗೊಂಡವನಂತೆ ಅಲ್ಲಿಂದ ಕಾಲುಕಿತ್ತ."

"ಮೇದಪ್ಪ ನೋಡೋಕೆ ಹೇಗಿದ್ದ?"